ದಿನಾಂಕಃ 05-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ ಆರ್ ಎನ್ ವಕೀಲರಿಂದಃ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ, ಬರೆಸಿ ಓದಿಸಿ, ಕೇಳಿ ತಿಳಿದುಕೊಂಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ.

2. ಎದುರುದಾರರು ನೀಡಿದ ಅಲಭ್ಯ ಪ್ರಮಾಣ ಪತ್ರ ಹಾಜರು ಪಡಿಸಿದ್ದು ನಿಪಿಃ1 ಎಂದು ಗುರುತಿಸಲಾಯಿತು. ನನ್ನ ಶಾಲಾ ವರ್ಗಾವಣಾ ಪ್ರಮಾಣ ಪತ್ರ ಹಾಜರು ಪಡಿಸಿದ್ದು ನಿಪಿಃ2 ಎಂದು ಗುರುತಿಸಲಾಯಿತು. ಆಧಾರ ಕಾರ್ಡ ಹಾಜರು ಪಡಿಸಿದ್ದು, ಸಾಕ್ಷಿ ಮೂಲ ದಾಖಲೆ ತನ್ನ ದೈನಂದಿನ ಕೆಲಸಗಳಿಗೆ ಅವಶ್ಯಕತೆ ಇರುವುದರಿಂದ ಹಿಂತಿರುಗಿಸುವಂತೆ ಕೋರಿರುತ್ತಾರೆ. ಮೂಲ ದಾಖಲೆಯನ್ನು ದೃಢೀಕೃತ ದಾಖಲೆಗೆ ತಾಳೆ ಮಾಡಿ, ನೋಡಲಾಗಿ ಸರಿ ಇರುತ್ತದೆ. ಆದ್ದರಿಂದ ಮೂಲ ದಾಖಲೆಯನ್ನು ಹಿಂತಿರುಗಿಸಿ ದೃಢೀಕೃತ ಆಧಾರ ಕಾರ್ಡನ್ನು ನಿಪಿಃ3 ಎಂದು ಗುರುತಿಸಲಾಯಿತು. ನನ್ನ ಜನ್ಮ ದಿನದ ದಾಖಲೆ ಅವಶ್ಯಕವಿರುವುದರಿಂದ ನನ್ನ ಅರ್ಜಿಯಲ್ಲಿ ಪ್ರಾರ್ಥಿಸುವಂತೆ ಕೋರಿರುತ್ತೇನೆ.

**ಪಾಟೀ ಸವಾಲುಃ** (ಈ ಪ್ರಕರಣದಲ್ಲಿ ಎದುರುದಾರರ ವಿರುದ್ಧ ಏಕಪಕ್ಷೀಯ ಆದೇಶವಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

**ಮರು ವಿಚಾರಣೆ ಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.